ಮನ್ನಾ ಮಾಡಲಾಗುತ್ತಿತ್ತು. ಮಂತ್ರಿ ಮಂಡಲವನ್ನೇ ಬದಲಾಯಿಸುವಷ್ಟು ಬಲಾಢ್ಯನಿದ್ದ ಆ ಶ್ರೀಮಂತ. ವಿಶ್ವದ ಅತ್ಯಂತ ಶ್ರೀಮಂತರ ಸಾಲಿನಲ್ಲಿ ಸಹ ಮಿಂಚುತ್ತಿದ್ದ. ಆದರೆ ಅವನಿಗೆ ಹಾಳಾದ ಮಾರಣಾಂತಿಕ ಕ್ಯಾನ್ಸರ್ ತಗುಲಿ ಚಿಕಿತ್ಸೆ ಪಡೆಯುತ್ತಿದ್ದ. ಲೋಕ ಪ್ರಸಿದ್ಧ ವೈದ್ಯರು ಇನ್ನೆರಡು ತಿಂಗಳು ಬದುಕಿರಬಹುದು ಎಂದು ಕೈ ಚೆಲ್ಲಿದ್ದರು. ಶ್ರೀಮಂತನು ಕೂಡಲೇ ಪ್ರವಾದಿ ಕೇಂದ್ರಕ್ಕೆ ಹೋಗಿ ಕಾಲಿಗೆ ಬಿದ್ದು ಭಕ್ತಿಪೂರ್ವಕವಾಗಿ ವಿಷಯ ನಿವೇದಿಸಿಕೊಂಡನು. ರೋಗಿಗೆ ಆಯಸ್ಸನ್ನು ಕೊಡಲು ಸಿದ್ಧವಿರುವ ದಾನಿಯನ್ನು ಹುಡುಕಿ ತರಲು ಪ್ರವಾದಿ ತಿಳಿಸಿದ.

ಆಯಸ್ಸಿನ ವರ್ಗಾವಣೆ ಪ್ರಕ್ರಿಯೆ ಹೇಗೆಂಬುದು ಯಾರಿಗೂ ಗೊತ್ತಿರಲಿಲ್ಲ. ಕಿಡ್ನಿ, ಲಿವರ್, ಕಣ್ಣು, ಹೃದಯದ ದಾನದಂತೆ ಶಸ್ತ್ರಚಿಕಿತ್ಸೆ ಮೂಲಕ ಮಾಡಬೇಕೋ ಅಥವಾ ಬೋಳು ತಲೆಯವರಿಗೆ ಮಾಡುವ ಕೂದಲು ಕಸಿಯ ಹಾಗೆಯೋ ಅಥವಾ ರಕ್ತ ದಾನದಂತೆಯೋ ಅಥವಾ ಮಾಟ ಮಂತ್ರವೋ ಒಂದೂ ಅರಿಯದೆ ಮೇಧಾವಿ ಸರ್ಜನ್‌ರನ್ನು ಭೇಟಿ ಮಾಡಿ ಪ್ರಶ್ನಿಸಿದರು. ಅವರಿಗೇನೂ ಗೊತ್ತಿರಲಿಲ್ಲ. ಇದರಲ್ಲೇನೋ ಮೋಸ ಇರುವಂತೆ ಕಾಣುತ್ತಿದೆ ಎಂದು ಕೆಲವರು ಗೊಣಗುಟ್ಟಿದರೇ ವಿನಹ ಬಾಯ್ಬಿಟ್ಟು ಹೇಳಲಿಲ್ಲ. ಪ್ರವಾದಿಗೆ ದೇಶದ ಪ್ರಧಾನಿ, ರಾಷ್ಟ್ರಪತಿ, ಮುಖ್ಯಮಂತ್ರಿಗಳೆಲ್ಲ ಶುಭ ಕೋರಿ ಪ್ರೋತ್ಸಾಹಿಸಿದ್ದರು. ಪ್ರವಾದಿಗಿದ್ದ ಜನಪ್ರಿಯತೆ ಕಂಡು ರಾಜಕಾರಣಿಗಳು, ಪ್ರೊಫೆಸರ್‌ಗಳು, ವಿಜ್ಞಾನಿಗಳು ಅವರ ವಿರುದ್ಧ ಮಾತಾಡುವುದು ತಮ್ಮ ಭವಿಷ್ಯಕ್ಕೆ ಕುತ್ತು ಎಂದು ಭಾವಿಸಿ ತಾತ್ಕಾಲಿಕವಾಗಿ ಜಾಣ ಮೌನ ತಾಳಿದರು.

ಅದೇ ನಗರದ ಜೈಲಿನಲ್ಲಿದ್ದ ಮೂವತ್ತರ ಹರೆಯದ ಕೈದಿಯೊಬ್ಬನಿಗೆ ಮರಣ ದಂಡನೆ ವಿಧಿಸಲಾಗಿತ್ತು. ಅವನು ಜೀವನವಿಡೀ ಕೊಲೆ ಸುಲಿಗೆ ದರೋಡೆ ಅತ್ಯಾಚಾರಗಳಲ್ಲಿ ಮುಳುಗಿದ್ದ. ಇನ್ನೆರಡು ದಿನದಲ್ಲಿ ನೇಣುಗಂಬ ಏರಲಿದ್ದ ಅವನನ್ನು ಕ್ಯಾನ್ಸರ್ ಪೀಡಿತ ಶ್ರೀಮಂತನ ಕಡೆಯವರು ಆಯಸ್ಸು ವರ್ಗಾವಣೆ ಬಗ್ಗೆ ಕೇಳಿಕೊಂಡು ಬಂದರು. ಕೇಳಿದಷ್ಟು ದುಡ್ಡು ಕೊಡುವುದಾಗಿ ಆಸೆ ಹಚ್ಚಿದರು. ಕೈದಿಗೆ ಒಟ್ಟು ಆಯಸ್ಸೆಷ್ಟೇ ಇರಲಿ ಇನ್ನೆರಡೇ ದಿನದಲ್ಲಿ ಸಾಯುವುದು ನಿಗದಿಯಾಗಿತ್ತು. ಗಲ್ಲಿಗೆ ಹಾಕುವವನನ್ನು ಮತ್ತು ಗಲ್ಲಿನ ಹಗ್ಗವನ್ನೂ ಸಹ ಪೊಲೀಸರು ಸಿದ್ಧಪಡಿಸಿಕೊಂಡಿದ್ದರು. ವ್ಯರ್ಥವಾಗುವ ಅವನ ಆಯಸ್ಸನ್ನು ದುಡ್ಡಿಗೆ ಮಾರಿಕೊಳ್ಳುವ ವಿನೂತನ ವ್ಯಾಪಾರಕ್ಕೆ ಕೈದಿಯನ್ನು ಆಕರ್ಷಿಸಿ ಗೊಂದಲದಲ್ಲಿ ಕೆಡವಿದರು.

ಕೈದಿಯು ತಾನು ದೇವರು ಮೆಚ್ಚುವಂತೆ ಬದುಕಬಹುದಿತ್ತು. ಆದರೆ ತಾನು ಎಂತೆಂಥ ಹೇಯ ಕೃತ್ಯಗಳನ್ನು ಮಾಡಿ ಈ ದುರ್ದೆಸೆಗೆ ಬಂದೆ ಎಂದು ಸಂಕಟ ಪಶ್ಚಾತ್ತಾಪಗಳಲ್ಲಿ ಮುಳುಗಿದ್ದ. ಕೈದಿಯ ಮನಸ್ಸು ತನ್ನ ಮುಗ್ಧ ಹೆಂಡತಿ ಮತ್ತು ನಿಷ್ಪಾಪಿ ಮಕ್ಕಳ ಕಡೆಗೆ ಹೊರಳಿ ಕರುಳೆಲ್ಲ ಕಿವುಚಿದಂತಾಯಿತು. ಸಂತೈಸಲೂ ಸಹ ಒಬ್ಬರಿಲ್ಲದ ತನ್ನ ದೈನೇಸಿ ಸ್ಥಿತಿಯ ಬಗ್ಗೆ ಹೇವರಿಕೆಯಾಯಿತು. ಹೆಂಡತಿ ಮಕ್ಕಳಿಗೆ ಜೀವನದಲ್ಲಿ ಒಮ್ಮೆಯಾದರೂ ಒಳ್ಳೆಯದನ್ನು ಮಾಡುವ ಅವಕಾಶವನ್ನು ಬಿಡಕೂಡದು ಎಂದುಕೊಂಡು ಆಯಸ್ಸು ದಾನ ಮಾಡಲು ಒಪ್ಪಿಕೊಂಡ.

ಪ್ರವಾದಿಯ ಪ್ರಕಾರ ಕೈದಿಯ ಮೂವತ್ತು ವರ್ಷ ಒಂಬತ್ತು ತಿಂಗಳು ಮೂರು ದಿನಗಳಷ್ಟು ಆಯಸ್ಸನ್ನು ಶ್ರೀಮಂತನಿಗೆ ವರ್ಗಾಯಿಸಬಹುದಿತ್ತು. ಶ್ರೀಮಂತನು ಅಷ್ಟೂ ಅವಧಿಯ ಆಯಸ್ಸನ್ನು ತನಗೆ ವರ್ಗಾಯಿಸಲು ಕೇಳಿಕೊಂಡ. ಅದರಲ್ಲಿ ಒಂದು ನಿಮಿಷವೂ ಕಮ್ಮಿಯಾಗಕೂಡದೆಂದು ಅವನು ಒತ್ತಾಯಿಸಿದ. ಕೈದಿಯ ಮತ್ತು ಶ್ರೀಮಂತನ ಆಧಾರ್ ಕಾರ್ಡ್, ಚುನಾವಣಾ ಗುರುತಿನ ಚೀಟಿ, ಪಾನ್ ಕಾರ್ಡ್ ಮತ್ತು ಬ್ಯಾಂಕಿನ ಪಾಸ್ ಪುಸ್ತಕಗಳನ್ನು ಒದಗಿಸಲಾಯಿತು. ಆಯಸ್ಸನ್ನು ಪಡೆಯಲಿದ್ದ ಶ್ರೀಮಂತನು ಕೈದಿಗೆ ದಿನಕ್ಕೆ ಒಂದು ಲಕ್ಷ ರೂಪಾಯಿಯಂತೆ ಮೂವತ್ತು ವರ್ಷ ಒಂಬತ್ತು ತಿಂಗಳು

